ಶನಿವಾರ, 20 ಮೇ 2017 | ಪುಟಗಳು: 20+4+4 | ಬೆಲೆ: ₹ 5.00
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರ
www.vijaykarnataka.com
PRIDE
ಸಂಪುಟ: 16 | ಸಂಚಿಕೆ: 294
VK
ವಿಜಯ ಕರ್ನಾಟಕ



ಜೈಲು ಶಿಕ್ಷೆ ರದ್ದು ಕೋರಿದ ಕರ್ಣನ್ ಅರ್ಜಿ: ವಿಚಾರಣೆಗೆ ಸ್ವೀಕರಿಸಲು ಸುಪ್ರೀಂ ನಕಾರ

AADHAAR ಸಮಾಜ ಕಲ್ಯಾಣ ಇಲಾಖೆ ಫಲಾನುಭವಿಗಳಿಗೆ ಆಧಾರ್ ಕಡ್ಡಾಯ: ಜೂ. 30ರ ಗಡುವು ವಿಸ್ತರಣೆಗೆ ಕೇಂದ್ರ ನಕಾರ P11

ಮೋದಿ ಭೇಟಿ ಮಾಡಿದ ತೆಂಡೂಲ್ಕರ್: ತೆರೆದುಕೊಂಡಿತು ಎ ಬಿಲಿಯನ್ ಡ್ರೀಮ್ಸ್

## ಸಹ್ಯಾದ್ರಿಯಲ್ಲಿ ಮೆಕ್‌ಟೆಕ್ ಗ್ಯಾರೇಜ್, ಸ್ಟಾರ್ಟ್‌ಅಪ್ ಉದ್ಘಾಟನೆ

# ಕೌಶಲ್ಯ ಇದ್ದರೆ ಭವಿಷ್ಯ: ಸಚಿವ ರೂಢಿ

**ವಿಕ ಸುದ್ದಿಲೋಕ** ಮಂಗಳೂರು

ನಗರದ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ನೂತನವಾಗಿ ಆರಂಭಿಸಲಾದ ಮೆಕ್- ಟೆಕ್- ಗ್ಯಾರೇಜ್ ಹಾಗೂ ಸ್ಟಾರ್ಟ್ ಅಪ್ ಯೋಜನೆಯನ್ನು ಕೇಂದ್ರ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ರಾಜೀವ್ ಪ್ರತಾಪ್ ರೂಢಿ ಗುರುವಾರ ಉದ್ಘಾಟಿಸಿದರು.

ವಿದ್ಯಾರ್ಥಿಗಳಿಗೆ ಕೌಶಲ್ಯ ಅತ್ಯಂತ ಅಗತ್ಯವಾಗಿದ್ದು, ಇದು ನಿಮ್ಮ ಭವಿಷ್ಯವನ್ನು ರೂಪಿಸುತ್ತದೆ. ದೇಶದಲ್ಲಿ ಕೌಶಲ್ಯ ಅಭಿವೃದ್ಧಿ ಯೋಜನೆ ಮೂಲಕ ಸಾಕಷ್ಟು ಮಂದಿಗೆ ಉದ್ಯೋಗವಕಾಶ ಲಭ್ಯ ವಾಗುತ್ತಿದೆ. ಸಹ್ಯಾದ್ರಿ ಕಾಲೇಜು ವಿದ್ಯಾರ್ಥಿಗಳು ಪ್ರಾಜೆಕ್ಟ್ ಪ್ರದರ್ಶನ ಸ್ಪರ್ಧೆಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುವುದು ಅಭಿನಂದನೀಯ ಎಂದು ರಾಜೀವ್ ಪ್ರತಾಪ್ ರೂಢಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಐಟಿಐ ಸೇರುವ ವಿದ್ಯಾರ್ಥಿಗಳಿಗೂ ಎನ್ಐಟಿ, ಐಐಟಿ ಮಾದರಿಯಲ್ಲಿ ನಾವು ಶಿಕ್ಷಣವನ್ನು ನೀಡುತ್ತಿದ್ದೇವೆ. ಇದು ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲಿದೆ ಎಂದು ಅವರು ಹೇಳಿದರು.



ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ನೂತನವಾಗಿ ಆರಂಭಿಸಲಾದ ಮೆಕ್ - ಟೆಕ್ - ಗ್ಯಾರೇಜ್ ಹಾಗೂ ಸ್ಟಾರ್ಟ್‌ಅಪ್ ಯೋಜನೆಯನ್ನು ಕೇಂದ್ರ ಸಚಿವ ರಾಜೀವ್ ಪ್ರತಾಪ್ ರೂಢಿ ಗುರುವಾರ ಉದ್ಘಾಟಿಸಿದರು.

ಸಂಸ್ಥೆ ಆವರಣದಲ್ಲಿ ಏರ್ಪಡಿಸಲಾದ ಅಂತ್‌ಕಾಲೇಜು ಪ್ರಾಜೆಕ್ಟ್ ಕಾಂಫಿಟೇಶನ್ 'ಟೆಕ್ ವಿಶನ್ 2017'ನ್ನು ಸಚಿವ ರೂಢಿ ಉದ್ಘಾಟಿಸಿದರು. ಇದೇ ಸಂದರ್ಭ ಸಚಿವರು ಸಂಸ್ಥೆಯ ಪ್ರಥಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸಾಧನೆಗಳ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಪುಸ್ತಕದಲ್ಲಿ ಐಐಟಿ ಮತ್ತು ಎನ್ಐಟಿಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಸಾಧನೆಗಳ ಅವಲೋಕನ ಇದೆ. ಸಹ್ಯಾದ್ರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮಂಜುನಾಥ ಭಂಡಾರಿ ಮಂಜುನಾಥ ಭಂಡಾರಿ ಸ್ವಾಗತಿಸಿದರು. ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಎಂ.ಉಮೇಶ್ ಭೂಷಿ ಉಪಸ್ಥಿತರಿದ್ದರು.